

ವಿಶ್ವದ ವಿವಿಧ ಭಾಗಗಳಿಂದ ಕರೆತರುತ್ತಿದ್ದ ಗುಲಾಮರಿಗಾಗಿ 16ನೇ ಶತಮಾನದಲ್ಲಿ ನಿರ್ಮಿಸಿದ್ದ ಕಟ್ಟಡ

ಉಳಿದಿರುವವರಿಗೆ ಎಷ್ಟರಮಟ್ಟಿಗೆ ಇರುತ್ತದೆ ಎಂಬಂತೆ ಅವರು, ಮೊನ್ನೆ ಮೊನ್ನೆ ಭಾರತದ ರೈಲು ದುರಂತದಲ್ಲಿ ಸತ್ತ ಮುನ್ನೂರು ಜನರನ್ನು ನೆನೆದು ಅನುತಾಪಪಟ್ಟರು.

## ಕಪ್ಪು ಜನರ ಇಂದಿನ ಪಾಡು

ಅತ್ಯಂತ ಸೃಜನಶೀಲ ಜನಾಂಗವೊಂದು ಇಂದು ತಮ್ಮ ಇತಿಹಾಸವನ್ನೇ ಮರೆತು, ತಮ್ಮ ನೆಲದಲ್ಲೇ ಉಳಿದ ಬಿಳಿಯರ ನಿವಾಸಗಳನ್ನು, ಜ್ಯೂಯಿಶ್ ಜನಾಂಗದ ವ್ಯಾಪಾರ ಸಾಪಾರದ ಕಟ್ಟಡಗಳನ್ನು, ಬ್ರಿಟಿಷರ ಇರಿಸು ಮುರುಸಿನ ಹಿರಿಮೆಯನ್ನು, ಡಚ್ಚರು ಮೆರೆದ ಸಾಹಸಗಳನ್ನು ಹೇಳಬೇಕಿದೆ. ತಮ್ಮ ಅನನ್ಯ ಪ್ರಕೃತಿಯೊಂದಿಗೆ ಇಂಥ ನೀಚತೆಯ ಹಿರಿಮೆಯನ್ನು ತೋರಿಸುವ ಹಣೆಬರಹ ಈ ಮೂಲನಿವಾಸಿಗಳದ್ದು.

ಕೇಪ್ ಸ್ವತಂತ್ರವಾಗಿದ್ದು 1991ರಲ್ಲಿ. ಅಲ್ಲಿಯವರೆಗೂ ಯೂರೋಪಿಯನ್ನರನ್ನು ಹೊರತುಪಡಿಸಿ, ಉಳಿದ ನಾಗರಿಕರು ಗುರುತಿನ ಚೀಟಿಯನ್ನು ತೋರಿಸಿ ಹೊರಗೆ ಓಡಾಡುವ ಅಗತ್ಯವಿತ್ತು. ಒಬ್ಬ ಮನುಷ್ಯ ಸತ್ತ ಕೂಡಲೇ ಅವನ ಗುರುತಿನ ಸಮಯ ಮುಗಿದು, ಅವರು ಈ ಊರನ್ನು ಖಾಲಿ ಮಾಡಬೇಕಾದ ಅಭದ್ರತೆ ಇತ್ತು. ಪ್ರತಿಯೊಬ್ಬನಿಗೂ ಬೇರೆಬೇರೆ ವಸತಿ. ಅವರ ಚರ್ಮ ಹಾಗೂ ಅವರ ದೇಶದ ಪ್ರತ್ಯೇಕತೆಯ ಗುರುತಿನಿಂದಾಗಿ. ಗುರುತಿನ ಚೀಟಿ ಪಡೆಯಲು ಭಾರೀ ಲಂಚ ತೆರಬೇಕಿತ್ತು.

ಅಂದು ಮುಟ್ಟಿಸಿಕೊಳ್ಳಲಾಗದ ಬಿಳಿಯರ ಮನೋವ್ಯಾಧಿಯಿಂದಾಗಿ ವಲಸಿಗರು, ಸ್ಥಳೀಯರು ಮನೋವೇದನೆಗೆ ಒಳಗಾಗುವುದಲ್ಲದೆ, ಹರಸಾಹಸದಲ್ಲಿ ಬದುಕುವ ಅನಿವಾರ್ಯತೆಯಿತ್ತು. ಆದರೆ, ಆಫ್ರಿಕಾ ಸರ್ಕಾರದ ಕಾರುಬಾರು, ರಸ್ತೆ, ಪ್ರಕೃತಿಯನ್ನು ಕಾಪಾಡಿಕೊಳ್ಳುವ ರೀತಿ, ಸ್ವಚ್ಛತೆ, ಕರಿಯರ ಇಂಗ್ಲಿಷ್ ಭಾಷೆಯ ಸುಲಲಿತತೆ, ಹಳೆ ಕಟ್ಟಡಗಳ ಸುರಕ್ಷತೆ – ಇವೆಲ್ಲ ಇಂದಿನ ಅಮೆರಿಕದ ಅನುಕರಣೆಯಂತೆ, ಯೂರೋಪಿಯನ್ನರಿಂದ ಪ್ರಭಾವಿತರಾಗಿರುವಂತೆ ನಮಗೆ ಕಾಣಿಸುತ್ತದೆ. ಇಲ್ಲಿನ ಪ್ರತಿಯೊಂದು ಜನಾಂಗಕ್ಕೂ ಅವರದ್ದೇ ಆದ ತಾಯಿಭಾಷೆ, ನೆಲಮೂಲ ಸಂಸ್ಕೃತಿಯಿದೆ. ಆದರೂ ಹೊರಗಿನಿಂದ ಬಂದ ಆಕ್ರಮಣಕಾರರ ನಡಾವಳಿಗಳನ್ನು ಇವರು ಹೊರಗಿನವರಿಗೆ ತೋರಬೇಕಿದೆ. ತಮ್ಮ ಸಮೃದ್ಧಿಯ ಪ್ರಕೃತಿಯಲ್ಲಿ ಕೂತು ಉಣ್ಣುವವರ ಕೈಕೆಳಗೆ ಇವರು ಇಂದಿಗೂ ನಲುಗುವುದು ನಿಂತಿಲ್ಲ.

ಕೆಲವು ಯೂನಿವರ್ಸಿಟಿಗಳಲ್ಲಿ, ವಿದ್ಯಾವಂತರಲ್ಲಿ ಬಿಟ್ಟರೆ ಆಫ್ರಿಕನ್ನರು ತಮ್ಮ ನೆಲದಲ್ಲಿ ತಾವೇ ಅಬ್ಬೇಪಾರಿಗಳಂತೆ, ಹಿಂಜರಿಕೆಯವರಂತೆ ಕಾಣಿಸುತ್ತಾರೆ. ಮುಂದೆ ಸಿಗಬಹುದಾದ ಸರ್ಕಾರದ ನಿವಾಸಕ್ಕಾಗಿ ಕಾಯುತ್ತ ಟೆಂಪರರಿ ಕಾಲೊನಿಗಳಲ್ಲಿ ಬದುಕುವ ಜನರ ಬವಣೆ ನಮ್ಮೂರಿನ ಸ್ಲಂಗಳ ಸಮಸ್ಯೆಯಂತೆಯೇ ಕಾಣಿಸುತ್ತವೆ.

## ಟೇಬಲ್ ಟಾಪ್ ಮೌಂಟೇನ್ ಹಾಗೂ ಚಾಪ್ ಮೆನ್ಸ್ ಪೀಕ್ ಡ್ರೈವ್

ಎರಡನೆಯ ದಿನ ಸೂರ್ಯ ಅಡ್ಡಾಡಲು ಅನುಮತಿ ಕೊಟ್ಟಿದ್ದ. ಇಂಚಿಂಚೇ ಪರದೆ ಸರಿಸಿ ತನ್ನ ಬೆಟ್ಟಗುಡ್ಡಗಳನ್ನು ಕಣ್ಣಿಗೆ ಕಾಣಿಸುತ್ತಿದ್ದ. ಟೇಬಲ್ ಟಾಪ್ ಮೌಂಟೇನ್ ಮೇಲಿಂದ ರೋಪ್ ವೇಯ ಟಾಪ್‌ನಲ್ಲಿ ಕಂಡ ಕಲ್ಲುಗುಡ್ಡದ ನೆಲಹಾಸು ಎರಡು ಮೂರು ಕಿ.ಮೀ.ನಷ್ಟಿದ್ದು, ಸಕ್ಯುಲೆಂಟ್ಸ್ ಹಾಗೂ ಸ್ಥಳದ ಸಸ್ಯಗಳ ಸಣ್ಣ ಉದ್ಯಾನ ಆ ಕಲ್ಲು ಗುಡ್ಡಕ್ಕೆ ಒಂದು ವಿಲಕ್ಷಣ ಸೌಂದರ್ಯವನ್ನಿತ್ತರೆ, ಅದರ ನಡುವೆ ಕಲ್ಲು ಗಾರೆಯ ಮೇಲೆ ಅಡ್ಡಾಡುವ ಸುಖವೇ ಬೇರೆ.

ಅಂದಿನ ಸ್ಥಳೀಯ ಕುರಿಗಾಹಿಗಳ ತಾಣವೀಗ ಸುಂದರ ವಿಹಾರ ಸ್ಥಳ. ಮೇಲಿಂದ ಎತ್ತ ನೋಡಿದರೂ ಮಂಜು. ಮಂಜು ತೆರೆ ಸರಿಸಿದರೆ ಹಿಂದೂ ಮಹಾಸಾಗರ ಹಾಗೂ ಅಟ್ಲಾಂಟಿಕದ ನೀರು, ನೀರ ತೆರೆ. ನಡುವೆ ಅಂಚಲ್ಲಿ ಕಾಣುವ ಲಯನ್ ಮೌಂಟೇನ್, ಇತರೆ ಬೆಟ್ಟಗುಡ್ಡಗಳು. ರೋಪ್ ವೇಯಿಂದ ಇಳಿದು, ಬೆಟ್ಟದ ಕೆಳಗಿಳಿದು, ಸುಂದರ ರಸ್ತೆಯ ಪಕ್ಕದ ವಿಲ್ಲಾಗಳನ್ನು ಹಾದು, ಕಡಲಂಚಿನ ದಾರಿಯಲ್ಲಿ ಸಾಗುತ್ತಿದ್ದೆವು.

ಬೀಚಿನ ಅಂಚಿನಲ್ಲಿ ಸಾಗಿದ ಆ ಒಂದೆರಡು ಗಂಟೆಯ ಡ್ರೈವ್ ಅವಿಸ್ಮರಣೀಯ. ಒಂದೆಡೆ ಚಾಚಿಕೊಂಡ ಗ್ರಾನೈಟ್ ಪರ್ವತ ಸಾಲುಗಳು ಎತ್ತರೆತ್ತರದ ಬೆಟ್ಟಗುಡ್ಡಗಳನ್ನು ಕಟೆದು ನಿಲ್ಲಿಸಿದಂತೆ ಕಾಣಿಸುತ್ತವೆ. ಮತ್ತೊಂದೆಡೆ ಸಾಗರದ ನೀರಿನ ಹರವು, ನಡುನಡುವೆ ಸುತ್ತುವ ಬೆಟ್ಟ ಸಾಲುಗಳು, ಮನೆಗಳು, ಕಣಿವೆಗಳು, ನೀರು ಹಾಗೂ ಪರ್ವತ ಸಾಲಿನ ಮೇರೆ ಮೀರಿದ ಚೆಲುವು, ಹಾರ್ಬರ್‌ಗಳು, ನೆವಿ ಸೆಟಲ್ಮೆಂಟ್‌ಗಳು, ಅಡ್ಡಾಡುವ ಸೀಲ್‌ಗಳು, ತಣ್ಣನೆ ಗಾಳಿ, ತುಂತುರು ಮಳೆ...

ಆ ಪ್ರದೇಶದಲ್ಲಷ್ಟೇ ಅರಳುವ ಹೂವಿನ ಚೆಲುವು, ನೀರಲ್ಲಿ ತೇಲಿಹೋಗಿ ಮೀನು ಹಿಡಿದು ಮಯ್ಯೊದರಿ, ಮಕ್ಕಳಂತೆ ತಪ್ಪು ಹೆಜ್ಜೆಯಿಟ್ಟು ನಡೆದು ಬರುತ್ತಿದ್ದ ಪೆಂಗ್ವಿನ್‌ಗಳು, ಎಲ್ಲೆ ಮೀರದ ಡಾಲ್ಫಿನ್ ಗಂಡಹೆಂಡಿರ ನಿಷ್ಠೆ, ಮರಳ ಗೂಡಿನಲ್ಲಿ ಕಾಯುವ ಮರಿಗಳು, ಹೆಗ್ಗಣವೂ ಅಲ್ಲದ, ಮೊಲವೂ ಅಲ್ಲದ ಕೂತಲ್ಲೇ ಕೂರುವ ಆ ಸ್ಥಳದ ಒಂದು ಪ್ರಾಣಿ. ಕಡಲ ಹಕ್ಕಿಗಳ ದಂಡು...

ಬಂಡೆಗೆ ತಲೆ ಚಚ್ಚಿಕೊಳ್ಳುವ ಅಲೆಯ ನೀರು, ಸರ್ಫಿಂಗ್ ಕಲಿಯಲು ಈಜು ಬೀಳುವ ಮಕ್ಕಳು, ಅಲೆಯ ಹೊಡೆತದಲ್ಲಿ ಮುಳುಗಿದರೂ ನಡುನೀರಲ್ಲಿ ಜಾರಿ ಗೆದ್ದು ಬರುವ ಯುವಕ ಯುವತಿಯರು, ವಾಕಿಂಗ್‌ನಲ್ಲಿ ತಬ್ಬಿ ನಡೆವ ಜೋಡಿಗಳು, ಸಂಸಾರಗಳು, ಮುದ್ದು ನಾಯಿಗಳ ಆಟ, ಹೋಟೆಲ್ ಸಾಲುಗಳು, ಅಂಗಡಿ ಮುಂಗಟ್ಟುಗಳು...

...ಈ ಎಲ್ಲವನ್ನೂ ಹಾದು ಬರುವಾಗ ಸಿಗುವ ಅಲ್ಲೊಬ್ಬ ಇಲ್ಲೊಬ್ಬ ಕಪ್ಪು ಆಫ್ರಿಕನ್ನರನ್ನು ಕಂಡ ಕೂಡಲೇ ಪರ್ಸಿನ ಸುತ್ತ ಬಿಗಿಯುವ ನಮ್ಮ ಕೈಗಳು... ಸರ್ಫಿಂಗ್ ಬಿಳಿಯರ ಆಟ. ಈಗೀಗ ಅದರೊಳಗೆ ಕಪ್ಪು ಜನರು ನುಸುಳುತ್ತಿದ್ದಾರೆ.

ಕೇಪ್ ಟೌನಿನ ಸವಾರಿ ಹಿಂತಿರುಗುವಾಗ ಕತ್ತಲು ತುಂಬಿದ ನಿರ್ಗತಿಕರ ವಸತಿ ಹಾದು ಹೋಗಬೇಕಾಯಿತು. ಗಳಗಳನೆ ಮಾತಾಡುತ್ತ ಅಡ್ಡಾಡುವ ಕಪ್ಪು ಜನರ ಬೀದಿಬದಿಯ ತಿನಿಸು ಕೆಂಡದಲ್ಲಿ ಬೇಯುತ್ತಿದ್ದವು. ರಸ್ತೆಯಲ್ಲಿ ತರಕಾರಿ ಇನ್ನಿತರೆ ವಸ್ತುಗಳ ಮಾರಾಟವಾಗುತಿತ್ತು. ಏರ್‌ಪೋರ್ಟಿನ ಲೈಟುಗಳು ಝಗಮಗಿಸುತ್ತಿದ್ದುದನ್ನು ಕಂಡ ಕೂಡಲೇ ಸ್ವರ್ಗದಿಂದ ಬಿದ್ದ ತುಣುಕೊಂದು ಕತ್ತಲೆಯಲ್ಲಿ ಉಳಿದ ನೆರಳಲ್ಲಿ ನಿಂತವರನ್ನು ನುಂಗಿದಂತೆ ಕಂಡಿತು.

ಪ್ರತಿಕ್ರಿಯಿಸಿ: feedback@sudha.co.in